ಮಾರ್ಕೆಟ್ಟುಗಳಲ್ಲಿ ಪ್ರಪಂಚದ ನಾನಾ ಭಾಗಗಳ ಹಣ್ಣುಗಳು ಸಿಗುತ್ತವೆ.

ನಾನೇನಾದರೂ ಗಂಡಾಗಿದ್ದಿದ್ದರೆ ಇದೇ ವಾಕ್ಯದ ವ್ಯಾಖ್ಯೆಯನ್ನು ಮೋಜಿಗಾಗಿ ಒಂದಿಷ್ಟು ವಿಸ್ತರಿಸಿ 'ವಿಶ್ವದ ಎಲ್ಲ ಹೆಣ್ಣುಗಳ ಬಗ್ಗೆ ಪ್ರೀತಿ' ಎಂದು ಮಾರ್ಪಾಡು ಮಾಡಿಕೊಳ್ಳುತ್ತಿದ್ದೆನೇನೊ. ಆದರೆ, ಭಾರತೀಯ ಹೆಣ್ಣಾಗಿ 'ಮತ್ತೊಬ್ಬ ಗಂಡಸಿನ ಬಗ್ಗೆ ಪ್ರೀತಿ?' ಎಂಬ ಪರಿಕಲ್ಪನೆಯನ್ನು ಒಪ್ಪುವುದೂ ನನ್ನ ಮನಸ್ಸಿಗೆ ಸಾಧ್ಯವಾಗಿರಲಿಲ್ಲ.

ಹರೆಯದಲ್ಲಿದ್ದಾಗ ಕೀಟಲೆಗಾಗಿಯೋ ಮತ್ತೊಂದಕ್ಕೋ ಭಾರತೀಯ ಗೆಳತಿಯರ ಜೊತೆ ಮಾತಾಡುವಾಗ ನನಗೆ ಚೀನಾ ದೇಶದ ಗಂಡಸರ ಬಗ್ಗೆ ವಿಶೇಷ ಒಲವಿದ್ದುದನ್ನು ಹೇಳಿಕೊಂಡಿದ್ದ ನೆನಪು. ಅದಕ್ಕಾಗಿ ಅವರು ಮುಂದಿನ ದಿನಗಳಲ್ಲಿ ನನ್ನನ್ನು ಛೇಡಿಸಿದ್ದೂ ಇತ್ತು. ಆದರೆ, ಬೆಳೆದ ವಾತಾವರಣಕ್ಕೆ ತಕ್ಕಂತೆ ಒದಗಿದ ಭಾರತೀಯ ಗಂಡಸೇ ನನಗೆ ಇಷ್ಟವಾಗುವುದು ಸಹಜ ತಾನೇ?

ನಾನಿರುವ ಈ ಪ್ರಪಂಚದಲ್ಲಿ ಜಗತ್ತಿನ ಎಲ್ಲೆಡೆಯಿಂದ ಬಂದು ನೆಲಸಿರುವ ಜನರನ್ನು ನೋಡಿದ್ದೇನೆ. ಸಹೋದ್ಯೋಗಿಗಳು, ರೋಗಿಗಳು, ಆಡಳಿತಗಾರರು ಅಂತ ಹಲವು ದೇಶದ ಜನರನ್ನು ಭೇಟಿಯಾಗುವುದು ದಿನವೂ ನಡೆಯುತ್ತದೆ. ಹೆಂಗಸರೇ ಇರುವ ಜಾಗಗಳಿಗೆ ಆಕರ್ಷಕವಾಗಿರುವ ಗಂಡಸೊಬ್ಬ ಬಂದು ಹೋದರೆ ಹೆಂಗಳೆಯರು ಅವನ ಬಗ್ಗೆ ನೂರು ಜೋಕುಗಳನ್ನು ಸಿಡಿಸುವುದು ಇಲ್ಲಿ ಸಾಮಾನ್ಯ. ನಗೆಸಾರಕ್ಕಾಗಿ ಮೋಜಿನ ವಾಕ್ಯಗಳನ್ನು ಕಟ್ಟಿ, ನುಡಿಗಟ್ಟುಗಳನ್ನು ಎಸೆದು ಬರಿಯ ಪದಗಳಲ್ಲಿಯೇ ಅವರನ್ನು ನಾಚಿಸಿಬಿಡುತ್ತಾರೆ. ಮರುಕ್ಷಣ ಅವತ್ತಿನ ಲೆಕ್ಕಕ್ಕೆ ಆ ಬಗ್ಗೆ ನಕ್ಕು ಮರೆತುಬಿಡುತ್ತಾರೆ. ಇದೆಲ್ಲ ಅರ್ಥವಾಗಲು ನನಗೆ ಹಲವು ವರ್ಷಗಳು ಬೇಕಾಗಿದ್ದವು.



ಕೆಲವು ಹಣ್ಣು ಹಣ್ಣು ಮುದುಕಿಯರು ಕೂಡ ತಮ್ಮನ್ನು ಚೆನ್ನಾಗಿ ನೋಡಿಕೊಂಡ, ಅವರಿಗಿಂತ 30 ವರ್ಷ ಕಡಿಮೆ ವಯಸ್ಸಿನ ಪುರುಷ ವೈದ್ಯರನ್ನು "ಯು ಆರ್ ಸಚ್ ಎ ನೈಸ್ ಡಾಕ್ಟರ್, ಐ ವಿಷ್ ಐ ಕುಡ್ ಮ್ಯಾರಿ ಯು'' (ಎಂತ ಒಳ್ಳೆ ಡಾಕ್ಟರಪ್ಪ, ನಿನ್ನನ್ನು ಮದುವೆಯಾಗುವಂತಿದ್ದರೆ ಚೆನ್ನಾಗಿತ್ತು) ಎಂಬಂತಹ ಉದ್ಗಾರಗಳನ್ನು ತೆಗೆದು ಚೋದ್ಯವಾಡುವುದನ್ನು ನೋಡಿದ್ದೇನೆ. ಒಮ್ಮೆ ಒಟ್ಟಿಗೆ ಬಂದ ಗಂಡಹೆಂಡಿರನ್ನು ಸ್ವಾಗತಿಸಿದೆ. ಹೆಂಡತಿ ತನ್ನ ಗಂಡನನ್ನು ತೋರಿಸುತ್ತ, "ವೆದರ್ ಯು ಬಿಲೀವ್ ಇಟ್ ಆರ್ ನಾಟ್, ಐ ಯಾಮ್ ಮ್ಯಾರಿಡ್ ಟು ಹಿಮ್ ಫಾರ್ 30 ಇಯರ್ಸ್ ನೌ'' (ನಂಬುತ್ತೀಯೋ ಇಲ್ಲವೋ, ಆದರೆ ನಾನು ಈ ಮನುಷ್ಯನನ್ನು ಮದುವೆಯಾಗಿ 30 ವರ್ಷಗಳಾಗಿವೆ) ಎಂದು ಜೋರಾಗಿ ಹೇಳಿ ಜೊತೆಗೆ ''ಮೈ ಓನ್ಲಿ ಸಿನ್'' (ನಾನು ಮಾಡಿದ ಏಕೈಕ ಪಾಪ) ಎಂದು ಕೇಳುವಂತೆಯೇ ಪಿಸುಗುಟ್ಟಿ, ಇಬ್ಬರೂ ಪಕ ಪಕನೆ ನಕ್ಕರು. ಆಗೆಲ್ಲ ನಾನೂ ಅವರೊಡನೆ ಸೇರಿ ಮನಸಾರೆ ನಕ್ಕು ಹಗುರಾಗಿ ಬಿಡುತ್ತಿದ್ದೆ.

ಇಲ್ಲಿನ ಸಾಮಾಜಿಕ ರೀತಿಗಳನ್ನು ತಿಳಿದ ಹೆಂಗಸು ಗಂಡಸರ್ಯಾರೂ ಇದನ್ನು ಅಪಾರ್ಥ ಮಾಡಿಕೊಳ್ಳುವುದಿಲ್ಲ. ಬದಲಿಗೆ ಅಷ್ಟೇ ಚುರುಕಾದ ಉತ್ತರಗಳನ್ನು ನೀಡಿ ಎಲ್ಲರನ್ನೂ ನಗಿಸುತ್ತಾರೆ. ಏಕತಾನತೆಯ ಕೆಲಸದ ನಡುವೆ ಇಂತಹ ಘಟನೆಗಳು, ಮಾತುಗಳು ಎಲ್ಲರ ಮನಸ್ಸನ್ನು ತಿಳಿಗೊಳಿಸುವುದು ಮಾತ್ರ ನಿಜ. ಆದರೂ ಬೆಣ್ಣೆಯಲ್ಲಿ ಕೂದಲು ತೆಗೆದಂತೆ ಮಾತನಾಡುವ ನಯ ಬೇಕು. ಕರ್ನಾಟಕದ ಸಾಧಾರಣ ಊರಿನಿಂದ ಬಂದ ನನಗೆ ಹೀಗೆ ಮಾತನಾಡಲು ಬರುವುದು ಸಾಧ್ಯವೇ ಇಲ್ಲವೇನೋ?

ಗಂಡಸರು ಮತ್ತು ಹೆಂಗಸರ ನಡುವೆ ಕಡಿಮೆ ವ್ಯತ್ಯಾಸಗಳಿರುವ ನಾಡಿದು. ಇಂತಹ ವಾತಾವರಣದಲ್ಲಿ, ಲಿಂಗಗಳ ನಡುವಿನ ವ್ಯತ್ಯಾಸ ಹೆಚ್ಚು ಕಾಡುತ್ತಿರಲಿಲ್ಲ. ನನ್ನದು ಯಾವ ಲಿಂಗ ಎನ್ನುವುದು ಕೂಡ ಕೆಲವೊಮ್ಮೆ ನನಗೆ ವಾರಗಟ್ಟಲೆ ಮರೆತುಹೋಗುತ್ತಿತ್ತು.